ತಜಕಿಸ್ತಾನದಲ್ಲಿ ನಡೆಯುವ ಎಸ್‌ಸಿಒ ಸರ್ಕಾರಗಳ ಮುಖ್ಯಸ್ಥರ ಮಂಡಳಿ ಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ರಕ್ಷಣಾ ಸಚಿವ ಶ್ರೀ ರಾಜನಾಥ್ ಸಿಂಗ್

ರಕ್ಷಣಾ ಸಚಿವ ಶ್ರೀ ರಾಜನಾಥ್ ಸಿಂಗ್ ಅವರು 2026 ರ ಅಕ್ಟೋಬರ್ 19-20 ರಂದು ನಡೆಯಲಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಸದಸ್ಯ ರಾಷ್ಟ್ರಗಳ ಸರ್ಕಾರಗಳ ಮುಖ್ಯಸ್ಥರ ಮಂಡಳಿಯ (ಸಿಎಚ್‌ಜಿ) 25 ನೇ ಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಲು ತಜಕಿಸ್ತಾನದ ದುಶಾಂಬೆಗೆ ಭೇಟಿ ನೀಡಲಿದ್ದಾರೆ.

2. ಈ ಸಭೆಯು ಎಸ್‌ಸಿಒ ಸದಸ್ಯ ರಾಷ್ಟ್ರಗಳ ನಡುವೆ, ವಿಶೇಷವಾಗಿ ವ್ಯಾಪಾರ, ಆರ್ಥಿಕತೆ, ಹೂಡಿಕೆ, ಸಂಪರ್ಕ, ನಾವೀನ್ಯತೆ ಮತ್ತು ಸಾಂಸ್ಕೃತಿಕ-ಮಾನವೀಯ ಸಂಬಂಧಗಳ ಕ್ಷೇತ್ರಗಳಲ್ಲಿ ಬಹುಪಕ್ಷೀಯ ಸಹಕಾರವನ್ನು ಬಲಪಡಿಸುವತ್ತ ಗಮನಹರಿಸುತ್ತದೆ. ಈ ಸಭೆಯಲ್ಲಿ, ಚಾಲ್ತಿಯಲ್ಲಿರುವ ಸಹಕಾರ ಉಪಕ್ರಮಗಳ ಪ್ರಗತಿಯನ್ನು ಪರಿಶೀಲಿಸುವ ಹಾಗೂ ಸಂಘಟನೆಯ ಆರ್ಥಿಕ ಮತ್ತು ಸಾಂಸ್ಥಿಕ ಕಾರ್ಯನಿರ್ವಹಣೆಗೆ ಸಂಬಂಧಿಸಿದ ನಿರ್ಧಾರಗಳನ್ನು ಪರಿಗಣಿಸುವ ನಿರೀಕ್ಷೆಯಿದೆ.

3. ಭಾರತವು ಎಸ್‌ಸಿಒದ ವಿವಿಧ ಕಾರ್ಯವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಹಾಗೂ ಸ್ಟಾರ್ಟ್‌ಅಪ್ ಮತ್ತು ನಾವೀನ್ಯತೆ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಹಾಗೂ ಜನರ ನಡುವಿನ ಸಂಬಂಧ ಮುಂತಾದ ಕ್ಷೇತ್ರಗಳಲ್ಲಿನ ಉಪಕ್ರಮಗಳ ಮೂಲಕ ಪ್ರಾದೇಶಿಕ ಸಹಕಾರಕ್ಕೆ ತನ್ನ ಕೊಡುಗೆಯನ್ನು ಮುಂದುವರಿಸಿದೆ.

4. ಈ ಸಭೆಯು, ಸಂಘಟನೆಯೊಳಗೆ ಪ್ರಾಯೋಗಿಕ ಹಾಗೂ ಪರಸ್ಪರ ಲಾಭದಾಯಕ ಸಹಕಾರವನ್ನು ಮುನ್ನಡೆಸುವ ಕುರಿತು ಇತರ ಎಸ್‌ಸಿಒ ಸದಸ್ಯ ರಾಷ್ಟ್ರಗಳೊಂದಿಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು ಭಾರತಕ್ಕೆ ಅವಕಾಶವನ್ನು ಕಲ್ಪಿಸುತ್ತದೆ.

5. ಹಿಂದಿನ ಸಿಎಚ್‌ಜಿ ಸಭೆಯು ರಷ್ಯಾದ ಮಾಸ್ಕೋದಲ್ಲಿ 18 ನವೆಂಬರ್ 2025 ರಂದು ನಡೆದಿದ್ದು, ಆಗ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಅವರು ಭಾರತವನ್ನು ಪ್ರತಿನಿಧಿಸಿದ್ದರು.

ನವದೆಹಲಿ

ಅಕ್ಟೋಬರ್ 19, 2026